## ಕರ್ನಾಟಕ ಸರ್ಕಾರ

ಸಂ.ಗ್ರಾಅಪ/32/ಎಸ್‌ಜೆವೈ 2011(ಎ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 30-11-2012.

## ಸುತ್ತೋಲೆ

ವಿಷಯ: ರಾಜ್ಯದಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಜಾತಿ ಗಣತಿ-2011 (ಎಸ್‌ಇಸಿಸಿ-2011) – ಗಣತಿಯಲ್ಲಿ ಬಿಟ್ಟುಹೋದ ಕುಟುಂಬಗಳನ್ನು ಸೇರ್ಪಡೆ ಮಾಡುವ ಬಗ್ಗೆ.

ಉಲ್ಲೇಖ:
1) ಸರ್ಕಾರದ ಸುತ್ತೋಲೆ ಸಂಖ್ಯೆ.ಗ್ರಾಅಪ 29 ಎಸ್‌ಜೆವೈ 2011 (ಎ-1), ದಿನಾಂಕ 15-11-2011, 22-03-2012 ಹಾಗೂ 23-07-2012.
2) ಸರ್ಕಾರದ ಅಧಿಸೂಚನೆ ಸಮಸಂಖ್ಯೆ ದಿ: 25-01-2012.
3) ಸರ್ಕಾರದ ಆದೇಶ ಸಂಖ್ಯೆ.ಗ್ರಾಅಪ 27 ಎಸ್‌ಜೆವೈ 2012, ದಿನಾಂಕ 06-06-2012.
4) ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆ ಮಂತ್ರಾಲಯ (MORD) ಪತ್ರ ಸಂಖ್ಯೆ.Q-16016/05/2012-AI (RD), ದಿನಾಂಕ 29-08-2012.

-: 0 :-

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು (MORD) ಉಲ್ಲೇಖ ಪತ್ರ (4) ರಂತೆ ಗಣತಿ ದತ್ತಾಂಶದಲ್ಲಿ ಕಂಡುಬಂದ ಕೆಲವು ತಪ್ಪು ನಮೂದುಗಳನ್ನು ಸರಿಪಡಿಸಲು 0.0.27b ತಂತ್ರಾಂಶವನ್ನು (Application Software) ಹೊರತಂದಿದ್ದು ಈಗಾಗಲೇ ರಾಜ್ಯದಲ್ಲಿ ಚಾರ್ಜ್ ಸೆಂಟರ್‌ಗಳ NIC ಸರ್ವರ್‌ಗೆ ಅಪ್‌ಲೋಡ್ ಮಾಡಲಾಗಿದೆ.

ಈ ತಪ್ಪು ನಮೂದುಗಳನ್ನು ಸರಿಪಡಿಸಿ ಗುಣಾತ್ಮಕ ದತ್ತಾಂಶ ಹೊರತರಲು ಈಗಾಗಲೇ ಪರಿಶೀಲನಾ ಅಧಿಕಾರಿಗಳನ್ನು ನೇಮಿಸಿ, ಕ್ರಮ ಕೈಗೊಳ್ಳಲು ರಾಜ್ಯದ ಎಲ್ಲಾ ಪ್ರಧಾನ ಎಸ್‌ಇಸಿಸಿ -2011 ಅಧಿಕಾರಿಗಳಿಗೆ ಸೂಚಿಸಲಾಗಿದೆ.

ರಾಜ್ಯದಲ್ಲಿ NIC ಸರ್ವರ್‌ಗೆ ಅಪ್‌ಲೋಡ್ ಮಾಡಿರುವ ದತ್ತಾಂಶದಂತೆ 1.31 ಕೋಟಿ ಗುರಿಯಿದ್ದು ಕುಟುಂಬಗಳ ಸಂಖ್ಯೆಗೆ 1.34 ಕೋಟಿ ಕುಟುಂಬಗಳ ದತ್ತಾಂಶ ಹೊರಬಿದ್ದಿದೆ. ಇದರಿಂದಾಗಿ ರಾಜ್ಯದಲ್ಲಿ ಎಲ್ಲಾ ಕುಟುಂಬಗಳು ಗಣತಿಯಾದಂತೆ ಕಂಡುಬಂದರೂ ಸಹ ಗಣತಿ ಸಮಯದಲ್ಲಿ ಬೀಗ ಹಾಕಿದ ಮನೆಗಳು, ವಲಸೆ ಹೋದ ಮನೆಗಳು ಹಾಗೂ ಇನ್ನಿತರೆ ಕಾರಣಗಳಿಂದ ಕೈಬಿಟ್ಟು ಹೋಗಿದ್ದಲ್ಲಿ ಸರ್ಕಾರವು ರೂಪಿಸುವ ಬಡಜನತೆ ಕಲ್ಯಾಣ ಕಾರ್ಯಕ್ರಮಗಳಿಂದ ವಂಚಿತರಾಗುವರು.

ಆದ್ದರಿಂದ ಈ ರೀತಿ ಕೈಬಿಟ್ಟು ಹೋಗಿರುವ ಎಲ್ಲಾ ಕುಟುಂಬಗಳ ಗಣತಿಯನ್ನು ಮಾಡಬೇಕೆಂಬ ಉದ್ದೇಶದಿಂದ ರಾಜ್ಯದ ಎಲ್ಲಾ ಪ್ರಧಾನ ಎಸ್‌ಇಸಿಸಿ - 2011 ಅಧಿಕಾರಿಗಳು ಕೆಳಕಂಡ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಸೂಚನೆ ನೀಡಿದೆ.

- ಚಾರ್ಜ್ ಅಧಿಕಾರಿಗಳು ತಮ್ಮ ತಮ್ಮ ಚಾರ್ಜ್ ಕೇಂದ್ರಗಳಲ್ಲಿ 'ಡಾಟ ವ್ಯೂ ಮಾಡ್ಯುಲ್' ವೀಕ್ಷಿಸಿ ಕೈಬಿಟ್ಟು ಹೋಗಿರುವ ಬ್ಲಾಕ್‌ವಾರು ಕುಟುಂಬಗಳ ಪಟ್ಟಿ ತಯಾರಿಕೆಗೆ ಕ್ರಮ ವಹಿಸುವುದು.

➢ ಕರಡು ಪಟ್ಟಿ ಪ್ರಕಟಣೆಗೊಂಡ ಕೂಡಲೇ ಪಟ್ಟಿಯಲ್ಲಿ ಕೈಬಿಟ್ಟು ಹೋದ ಕುಟುಂಬಗಳಿಗೆ 'ಸಿ' ಅರ್ಜಿ ನಮೂನೆಗಳನ್ನು ಪ್ರಶ್ನಾವಳಿಗಳೊಂದಿಗೆ (ಗ್ರಾಮಾಂತರ / ನಗರ) ಲಗತ್ತಿಸಿ ಗಣತಿದಾರರ ಮೂಲಕ ಸಂಬಂಧಪಟ್ಟ ಕುಟುಂಬಗಳಿಗೆ ವಿತರಿಸಿ, ಭರ್ತಿ ಮಾಡಿಸಿ, ಅರ್ಜಿ ನಮೂನೆಗಳನ್ನು ಸಂಬಂಧಪಟ್ಟ ಹಕ್ಕುಬಾಧ್ಯತಾ ಮತ್ತು ಆಕ್ಷೇಪಣೆಗಳ ಸ್ವೀಕೃತಿ ಅಧಿಕಾರಿಗೆ ತಲುಪಿಸುವುದು.

➢ ಸ್ವೀಕೃತಿ ಅಧಿಕಾರಿಗಳು ಈ ಅರ್ಜಿಗಳನ್ನು ಸ್ವೀಕರಿಸಿದ ನಂತರ ಈಗಾಗಲೇ ನೀಡಿರುವ ಮಾರ್ಗಸೂಚಿಯಂತೆ ಹಕ್ಕುಬಾಧ್ಯತಾ ಹಾಗೂ ಆಕ್ಷೇಪಣಾ ಅರ್ಜಿಗಳ ವಿಲೇವಾರಿ ಅಧಿಕಾರಿಗೆ ತಲುಪಿಸುವುದು. ವಿಲೇವಾರಿ ಅಧಿಕಾರಿಯವರು ಈಗಾಗಲೇ ನೀಡಿರುವ ಸೂಚನೆಯಂತೆ ಈ ಅರ್ಜಿಗಳನ್ನು ಸಹ ವಿಲೇ ಮಾಡಿ ಕೈಬಿಟ್ಟು ಹೋಗಿರುವ ಎಲ್ಲಾ ಕುಟುಂಬಗಳನ್ನು ಗಣತಿ ಪಟ್ಟಿಗೆ ಸೇರ್ಪಡಿಸತಕ್ಕದ್ದು.

13/12/12

(ಎಂ.ದೀಪ)
ನಿರ್ದೇಶಕರು (ಸ್ವಉಕಾ) ಮತ್ತು
ರಾಜ್ಯದ ಎಸ್ಇಸಿಸಿ–2011 ನೋಡಲ್ ಅಧಿಕಾರಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

Speed Post
ಸ್ವಉಕಾ ಶಾಖೆ, ಗ್ರಾಅಪ ಇಲಾಖೆ
ರವಾನಿಸಿದ 13/12/12
ದಿನಾಂಕ
ರವಾನೆ ಗುಮಾಸ್ತ

ಇವರಿಗೆ,

1. ಪ್ರಾದೇಶಿಕ ಆಯುಕ್ತರು, ಬೆಂಗಳೂರು, ಮೈಸೂರು, ಬೆಳಗಾವಿ ಮತ್ತು ಗುಲ್ಬರ್ಗ ವಿಭಾಗಗಳು.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಹಾಗೂ ಪ್ರಧಾನ ಎಸ್ಇಸಿಸಿ–2011 ಅಧಿಕಾರಿಗಳು.
3. ಆಯುಕ್ತರು ಹಾಗೂ ಪ್ರಧಾನ ಎಸ್ಇಸಿಸಿ–2011 ಅಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಕೇಂದ್ರ ಕಛೇರಿ, ಹಡ್ಸನ್ ವೃತ್ತ, ಬೆಂಗಳೂರು.
4. ಆಯುಕ್ತರು ಹಾಗೂ ಪ್ರಧಾನ ಎಸ್ಇಸಿಸಿ–2011 ಅಧಿಕಾರಿಗಳು, ಮಹಾನಗರ ಪಾಲಿಕೆ: ಮೈಸೂರು, ಮಂಗಳೂರು. ಬೆಳಗಾಂ, ಹುಬ್ಬಳ್ಳಿ–ಧಾರವಾಡ, ಗುಲ್ಬರ್ಗ, ಬಳ್ಳಾರಿ ಮತ್ತು ದಾವಣಗೆರೆ.
5. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

ಪ್ರತಿ: ಮಾಹಿತಿಗಾಗಿ:

1. ಆಯುಕ್ತರು, ಪೌರಾಡಳಿತ ನಿರ್ದೇಶನಾಲಯ, ವಿ.ವಿ.ಟವರ್, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳು.
2. ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳು.
3. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳು.
4. ನಿರ್ದೇಶಕರು, ಗಣತಿ ನಿರ್ದೇಶನಾಲಯ, ಭಾರತ ಸರ್ಕಾರ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳು.
5. ರಾಜ್ಯ ಮಾಹಿತಿ ಅಧಿಕಾರಿ, ಎನ್.ಐ.ಸಿ., ವಿಶ್ವೇಶ್ವರಯ್ಯ ಕಿರುಗೋಪುರ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳು.
6. ವ್ಯವಸ್ಥಾಪಕರು, ಬಿ.ಇ.ಎಲ್. ಸಂಸ್ಥೆ, ಜಾಲಹಳ್ಳಿ, ಬೆಂಗಳೂರು, ಇವರು ಎಲ್ಲ ವೆಂಡರ್‌ಗಳಿಗೆ ತಿಳಿಸಿ ಚಾರ್ಜ್ ಕೇಂದ್ರಗಳು ಕೆಲಸ ನಿರ್ವಹಿಸಲು ಕ್ರಮ ತೆಗೆದುಕೊಳ್ಳುವುದು.
7. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳು.

D:\Jayashri.M.R1\Chandramouli..Docx